**MVC-1542/2024** **ಪಿ.ಡಬ್ಲ್ಯೂ-2 (ಡಾ.ಕರುಣಾಕರನ್)**

ದಿನಾಂಕಃ **02.05.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ. ಡಿ.ಪಿ.ಕೆ. ವಕೀಲರಿಂದ :</u>**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

ಈ ಪ್ರಕರಣದಲ್ಲಿ ನ್ಯಾಯಾಲಯದ ಸಾಕ್ಷಿ ಸಮನ್ಸ್ ಬಂದ ಪ್ರಯುಕ್ತ ನಾನು ನ್ಯಾಯಾಲಯಕ್ಕೆ ಹಾಜರಾಗಿ ದಾಖಲಾತಿಗಳನ್ನು ಹಾಜರುಪಡಿಸಿ ಸಾಕ್ಷಿ ನೀಡುತ್ತಿದ್ದೇನೆ.

ಗಾಯಾಳುವಿಗೆ ಸಂಬಂಧಪಟ್ಟಂತೆ 2 ಕೇಸ್ ಶೀಟ್ ಒಟ್ಟಾಗಿ **ನಿಪಿ-13** ಎಂದು, 7 ಕ್ಷ-ಕಿರಣಗಳನ್ನು ಒಟ್ಟಾಗಿ ನಿಪಿ14 ಎಂದು ಮತ್ತು ಹೊರರೋಗಿ ಚೀಟಿಯನ್ನು **ನಿಪಿ 15** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ. ಎನ್.ವಿ.ಆರ್. ವಕೀಲರಿಂದ :</u>**

ನಮ್ಮ ಆಸ್ಪತ್ರೆಗೆ ಬರುವ ಮೊದಲು ಗಾಯಾಳು ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಅಪಘಾತ ದಿನವೇ ಗಾಯಾಳು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಗಾಯಾಳುವಿನ ಹೇಳಿಕೆಯಂತೆ ಮಣಿಪಾಲ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡಿರುತ್ತಾರೆಂದು ತಿಳಿಯಿತು. ಕ್ಷ ಕಿರಣ ಹೊರತುಪಡಿಸಿ ಅದರ ವರದಿಯನ್ನು ನಾನು ಹಾಜರುಪಡಿಸಿಲ್ಲ. ಸಂಪೂರ್ಣ ಗುಣಮುಖರಾದ ನಂತರವೇ ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿರುತ್ತದೆ ಎಂದರೆ ಸೂಕ್ತ ಸಲಹೆಯನ್ನು ನೀಡಿ ಬಿಡುಗಡೆಗೊಳಿಸಿರುತ್ತೇವೆ ಎಂದು

ನುಡಿಯುತ್ತಾರೆ. ಯಾವ ಯಾವ ದಿನಾಂಕಗಳಂದು ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂಬ ದಾಖಲೆಗಳು ರೋಗಿಯ ಬಳಿ ಇರುತ್ತವೆ. ಸಲಹೆ ಸೂಚನೆಗಳನ್ನು ಸರಿಯಾಗಿ ಪಾಲಿಸದೇ ಆತನ ನಿರ್ಲಕ್ಷ್ಯತನದಿಂದ ಗಾಯ ಉಲ್ಬಗೊಂಡಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಸಲಹೆ ಮೇರೆಗೆ ಅಳವಡಿಸಿದ್ದ ಸ್ಕ್ರೂವನ್ನು ನಮ್ಮ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮುಖಾಂತರ ಹೊರತೆಗೆದಿರುತ್ತೇನೆ. ದಿನಾಂಕ 04.04.2025 ರಿಂದ 12.03.2026 ರವರೆಗೆ ನಡುವಿನ ಅವಧಿಯಲ್ಲಿ ನಮ್ಮ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಮತ್ತು ಈ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೇವಲ ಗಾಯಾಳುವಿನ ಹೇಳಿಕೆಯ ಮೇರೆಗೆ ಬಲಗಾಲಿಗೆ ಶೇ.36 ರಷ್ಟು ಅಂಗ ನ್ಯೂನ್ಯತೆ ಇದೆ ಎಂದು ಪರಿಗಣಿಸಿರುತ್ತೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಕೇಸ್ ಶೀಟ್ ನಲ್ಲಿ ಅಪಘಾತದ ಹಿನ್ನೆಲೆ ಕುರಿತು ನಮೂದಿಸಿಲ್ಲ ಎಂದರೆ ಸರಿ. ಅಪಘಾತ ಹಿನ್ನೆಲೆಯನ್ನು ಕೇಸ್ ಶೀಟ್ನಲ್ಲಿ ಕಡ್ಡಾಯವಾಗಿ ನಮೂದಿಸಬೇಕು ಎಂದರೆ ಸರಿಯಲ್ಲ. ಎಂ.ಎಲ್.ಸಿ. ರಿಜಿಸ್ಟರ್ ನಲ್ಲಿ ಈ ಬಗ್ಗೆ ನಮೂದಿಸಲಾಗಿದೆ. ನಾನು ಅದನ್ನು ಹಾಜರುಪಡಿಸಿಲ್ಲ. ಕೇಂದ್ರ ಸರ್ಕಾರದ 2024 ರ ಸುತ್ತೋಲೆ ಅನ್ವಯ ಅಂಗ ನ್ಯೂನ್ಯತೆ ನಿರ್ಧರಿಸಿರುತ್ತೇನೆ. ಅಂಗ ನ್ಯೂನ್ಯತೆಯ ಲೆಕ್ಕಾಚಾರವನ್ನು ಓಪಿಡಿ ಸ್ಲಿಪ್ ನಲ್ಲಿ ನಮೂದಿಸಿರುತ್ತೇನೆ.

3. ಪ್ರತ್ಯೇಕವಾಗಿ ನ್ಯೂನ್ಯತೆ ಲೆಕ್ಕಾಚಾರವನ್ನು ನಮೂದಿಸಿ ಕೊಡಲು ಅಡ್ಡಿ ಇದೆಯೇ ಎಂಬ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾರೆ. ದೈಹಿಕ ನ್ಯೂನ್ಯತೆ ಕುರಿತು ಅಂಗ ನ್ಯೂನ್ಯತೆ ಪರಿಗಣಿಸಿರುತ್ತೇನೆ. ಮುಂದುವರೆದ ಶಸ್ತ್ರ ಚಿಕಿತ್ಸೆಗೆ ರೂ.30 ರಿಂದ 35 ಸಾವಿರ ಖರ್ಚಾಗುತ್ತದೆ ಎಂದು ಸುಳ್ಳಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಅನುಕೂಲ ಮಾಡಿಕೊಡುವ ಸಲುವರ ಹಾಜರುಪಡಿಸಿರುವ ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒದಲಾಗಿದೆ.

**1 ನೇ ಅಪರ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**